ಮಂಗಳೂರು ನಗರದ ಮಧ್ಯದಲ್ಲಿ ಹೊಸ ಪಠ್ಯ ಪುಸ್ತಕ ಮಳಿಗೆ ನಿರ್ಮಾಣ.

1793 - ಶ್ರೀ ಕಂಬ್ಳೆ ಸುಂದರ್ ರಾವ್ (ಸುರತ್ಕಲ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ದಕ್ಷಿಣ ಕನ್ನಡ ಜಿಲ್ಲಾ ಪಠ್ಯಪುಸ್ತಕ ಮಳಿಗೆಗಾಗಿ ಹೊಸ ಕಟ್ಟಡ ನಿರ್ಮಾಣ ಆಗುತ್ತಿದೆಯೆ? ಹಾಗಿದ್ದಲ್ಲಿ ಎಲ್ಲಿ ಹಾಗೂ ಎಷ್ಟು ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ?*

2. *ಹೊಸ ಕಟ್ಟಡವನ್ನು ನಗರದಿಂದ ಹೊರಗಡೆಗೆ ನಿರ್ಮಿಸುತ್ತಿರುವುದರಿಂದ ಅಲ್ಲಿಯ ಜನರಿಗೆ ವ್ಯವಹಾರಕ್ಕೆ ಅನಾನುಕೂಲವಾಗುವುದಿಲ್ಲವೆ?*

3. *ವರ್ಷವೊಂದರ 25 ಲಕ್ಷ ರೂಗಳಿಗಿಂತ ಹೆಚ್ಚು ವ್ಯವಹಾರವುಳ್ಳ ಈ ಮಳಿಗೆಗೆ ಮಂಗಳೂರು ನಗರದ ಮಧ್ಯದಲ್ಲಿ ನಿರ್ಮಿಸಲು ಅವಕಾಶ ಕಲ್ಪಿಸಲು ಸಾಧ್ಯವಿಲ್ಲವೆ?*

4. *ಸದರಿ ಪಠ್ಯಪುಸ್ತಕ ಮಳಿಗೆಗೆ ಒಬ್ಬ ಅಧೀಕ್ಷಕರ ನೇಮಕಾತಿಯನ್ನು ಮಾಡುವ ವಿಚಾರ ಸರ್ಕಾರದ ಮುಂದೆ ಇದೆಯೇ?*

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

1. ಹೌದು. ಈ ಕಟ್ಟಡವು ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಮೇರಿಹಿಲ್ ಎಂಬ ಸ್ಥಳದಲ್ಲಿ ರೂ.19.30 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ.

2. ನಗರ ವ್ಯಾಪ್ತಿಯೊಳಗಡೆ ಈ ಕಟ್ಟಡ ನಿರ್ಮಾಣವಾಗುತ್ತಿರುವುದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

3. ಮಂಗಳೂರು ನಗರದ ಮಧ್ಯಭಾಗದಲ್ಲಿ ಅವಶ್ಯವಿರುವಷ್ಟು ಸ್ಥಳ ಸಿಗದೆ ಇರುವ ಕಾರಣ ಇದು ಅಸಾಧ್ಯ.

4. ಒಬ್ಬರು ಪ್ರಥಮ ದರ್ಜೆ ಸಹಾಯಕರು ಇದರ ನಿರ್ವಹಣೆ ಮಾಡುತ್ತಿದ್ದಾರೆ ಅಧೀಕ್ಷಕರ ನೇಮಕಾತಿಯ ಬಗ್ಗೆ ಸದ್ಯಕ್ಕೆ ಪ್ರಸ್ತಾಪ ಇರುವುದಿಲ್ಲ.

ವಲಯ ಅರಣ್ಯ ಕಛೇರಿಗಳಿಗೆ ಮಾಹಿತಿ ಸೌಲಭ್ಯ.

1794 - ಶ್ರೀ ಕುಂಬ್ಳೆ ಸುಂದರ್ ರಾವ್ (ಸುರತ್ಕಲ್) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಅರಣ್ಯ ಇಲಾಖೆಯಡಿಯಲ್ಲಿ ಒಟ್ಟು ಇರುವ ವಲಯ ಅರಣ್ಯ ಕಛೇರಿಗಳೆಷ್ಟು?*

ಆ) *ಸಮರ್ಪಕವಾಗಿ ಕಾರ್ಯ ನಿರ್ವಹಿಸಲು ಅಲ್ಲಿ ವಾಹನ ಸೌಲಭ್ಯವನ್ನು ಒದಗಿಸಲಾಗಿದೆಯೇ?*

ಇ) *ಇಲ್ಲವಾದಲ್ಲಿ ಯಾವಾಗ ಒದಗಿಸಿ ಅರಣ್ಯ ರಕ್ಷಣೆಗೆ ಸೂಕ್ತ ವ್ಯವಸ್ಥೆಯನ್ನು ಮಾಡಲಾಗುವುದು?*

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಅರಣ್ಯ ಸಚಿವರು) :

ಅ) ಅರಣ್ಯ ಇಲಾಖೆಯಲ್ಲಿ 470 ವಲಯ ಅರಣ್ಯ ಅಧಿಕಾರಿಗಳ ಕಛೇರಿಗಳಿವೆ.

ಆ) ಇಲಾಖೆಯಲ್ಲಿ 316 ಪ್ರಾದೇಶಿಕ ಹಾಗೂ ವನ್ಯಜೀವಿ ವಲಯಗಳಿದ್ದು, ಅವುಗಳ ಪೈಕಿ 75 ಪ್ರಾದೇಶಿಕ ಹಾಗೂ ವನ್ಯಜೀವಿ ವಲಯಗಳಿಗೆ ವಾಹನ ಸೌಲಭ್ಯವನ್ನು ಒದಗಿಸಲಾಗಿದೆ.

ಇ) ಅವಶ್ಯವಿದ್ದರೆ ವಾಹನಗಳನ್ನು ಹಂತ ಹಂತವಾಗಿ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಸುರತ್ಕಲ್ ಮೂಡುಶೆಡ್ ಕ್ಷಯರೋಗ ಆಸ್ಪತ್ರೆ ಬಗ್ಗೆ.

1795 - ಶ್ರೀ ಕಂಬ್ಳೆ ಸುಂದರ್‌ರಾವ್ (ಸುರತ್ಕಲ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಸುರತ್ಕಲ್ ಮೂಡುಶೆಡ್ಡ್ ಕ್ಷಯರೋಗ ಆಸ್ಪತ್ರೆಗೆ ಸೇರಿದ ಜಮೀನಿನ ವಿಸ್ತಾರವೆಷ್ಟು?*
2. *ಪಿಲಿಕುಳ ನಿಸರ್ಗಧಾಮಕ್ಕೆ ಆಸ್ಪತ್ರೆಯ ಸ್ಥಳವನ್ನು ಬಿಟ್ಟುಕೊಡಲಾಗಿದೆಯೇ?ಕೊಟ್ಟಿದ್ದರೆ ಎಷ್ಟು ಜಾಗವನ್ನು ಬಿಟ್ಟು ಕೊಡಲಾಗಿದೆ?*
3. *ಕ್ಷಯರೋಗ ಆಸ್ಪತ್ರೆಯ ಉಳಿಕೆ ಸ್ಥಳದ ರಕ್ಷಣೆಗಾಗಿ ಏನು ಕ್ರಮ ಕೈಗೊಂಡಿದೆ?*
4. *ಸಾರ್ವಜನಿಕರು ಸ್ವೇಚ್ಛೆಯಿಂದ ಆ ಸ್ಥಳವನ್ನು ದುರುಪಯೋಗಪಡಿಸಿ ಮುಂದೆ ಸ್ವಾಧೀನಪಡಿಸುವ ಸಂಭವ ಇದೆಯೆಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?*
5. *ಪ್ರಸಕ್ತ ಸಾಲಿನಲ್ಲಿ ಆವರಣ ನಿರ್ಮಾಣ ಮಾಡಲಾಗುವುದೆ?*

ಡಾ|| ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

1. 265.8 ಎಕರೆ
2. ಇಲ್ಲ.
3. ಮುಳ್ಳುತಂತಿ ಬೇಲಿ ಹಾಕಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.
4. ಇಲ್ಲ.
5. ಹಂತ ಹಂತವಾಗಿ ಕಾಮಗಾರಿ (ಆವರಣ ಬೇಲಿ) ಕೈಗೊಳ್ಳಲು ಕ್ರಮ ತೆಗೆದು ಕೊಳ್ಳಲಾಗುವುದು.

ದ. ಕನ್ನಡ ಜಿಲ್ಲೆಯ ಶಾಲಾ ಕೊಠಡಿಯ ಕಳಪೆ ಕಾಮಗಾರಿ.

1796 - ಶ್ರೀ ಕುಂಬ್ಳೆ ಸುಂದರ್‌ರಾವ್ (ಸುರತ್ಕಲ್) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆ ಕಳಪೆ ಕಾಮಗಾರಿಯೆಂದು ಗುರುತಿಸಿರುವ ಶಾಲಾ ಕೊಠಡಿಗಳ ಸಂಖ್ಯೆ ಎಷ್ಟು?*